# <u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಕಲೇಶಪುರ</u>

<u>ಸಿಸಿ ಸಂಖ್ಯೆ: **986/2023**</u>

ಪಿರ್ಯಾದಿದಾರರು ಃ ಸಕಲೇಶಪುರ ಗ್ರಾಮಾಂತರ ಆರಕ್ಷಕ ಠಾಣೆ.

ವಿರುದ್ಧ

ಆರೋಪಿತರು ಃ ಶ್ರೀ. ಜಗದೀಶ,
ಬಿನ್ ಮಂಜುನಾಥ,
**48** ವರ್ಷ,
ವಾಸ- ಹರಗರಹಳ್ಳಿ ಗ್ರಾಮ,
ಸಕಲೇಶಪುರ ತಾಲ್ಲೂಕು,
ಹಾಸನ ಜಿಲ್ಲೆ.

## <u>ದೋಷಾರೋಪಣೆ</u>

<u>ನಾನು ಶ್ರೀ ಮಹೇಂದ್ರ ಎಂ., ಬಿ.ಎ. ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು, ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,. ಸಕಲೇಶಪುರ., ಆದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪ ಹೊರಿಸುತ್ತೇನೆ:-</u>

1. ದಿನಾಂಕಃ 07.04.2023 ರಂದು ಮಧ್ಯಾಹ್ನ 1.30 ಗಂಟೆ ಸಮಯದಲ್ಲಿ, ಸಕಲೇಶಪುರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು, ಕಸಬಾ ಹೋಬಳಿ, ಹರಗರಹಳ್ಳಿ ಗ್ರಾಮದ ಆರೋಪಿಯಾದ ನೀವು ಚಾಸಾ.1/ಶ್ರೀ. ಪ್ರಜ್ವಲ್ ಉಪಧ್ಯಾಯ ರವರು ಹಾಗೂ ಅವರ ಸಂಬಂಧಿ ಚಾಸಾ-ಪಿ.ಎನ್. ಸತ್ಯಪ್ರಕಾಶ ರವರುಗಳು ತಮ್ಮ ಬಾಬ್ತು ದೇವನದರಿ ರೆಸಾರ್ಟ್ನ ಕಾಮಗಾರಿಯನ್ನು ನಡೆಸುತ್ತಿದ್ದ ಸಮಯದಲ್ಲಿ ರೆಸಾರ್ಟ್ಗೆ ಅತಿಕ್ರಮ ಪ್ರವೇಶ ಮಾಡಿರುತ್ತೀರಿ. ಆದಕಾರಣ ನೀವು ಭಾ.ದಂ.ಸಂಹಿತೆ ಕಲಂ.447 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

2. ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ, ಆರೋಪಿಯಾದ ನೀವು, ಚಾಸಾ.1 ಮತ್ತು ಚಾಸಾ.2 ರವರಿಗೆ ಅಡ್ಡಗಟ್ಟಿ ಮುಂದೆ ಹೋಗದಂತೆ ತಡೆದಿರುತ್ತೀರಿ. ಆದಕಾರಣ ನೀವು ಭಾ.ದಂ.ಸಂ. ಕಲಂ.341 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

3. ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ, ಆರೋಪಿಯಾದ ನೀವು, ಚಾಸಾ.1 ಮತ್ತು ಚಾಸಾ.2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗವನ್ನುಂಟು ಮಾಡುತ್ತೀರಿ. ಆದಕಾರಣ ನೀವು ಭಾ.ದಂ.ಸಂಹಿತೆ ಕಲಂ. 504 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

4. ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ, ಆರೋಪಿಯಾದ ನೀವು, ಚಾಸಾ.1 ಮತ್ತು ಚಾಸಾ.2 ರವರಿಗೆ ಕೈಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿರುತ್ತೀರಿ. ಆದಕಾರಣ ನೀವು ಭಾ.ದಂ.ಸಂ. ಕಲಂ.323 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

5. ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ, ಆರೋಪಿಯಾದ ನೀವು, ಚಾಸಾ.1 ಮತ್ತು ಚಾಸಾ.2 ರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆದಕಾರಣ ನೀವು ಭಾ.ದಂ.ಸಂ. ಕಲಂ. 506 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

1. ಸದರಿ ಆಪಾದನೆ ಓದಿ ಹೇಳಿದ್ದು ಅರ್ಥವಾಯಿತೆ ?

ಉತ್ತರ ಃ

2. ನಿಮ್ಮ ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೋ ?
ಉತ್ತರ ಃ

(ಈ ಮೇಲಿನ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಯಿತು)

ದಿನಾಂಕಃ 24.07.2024

ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ,. ಸಕಲೇಶಪುರ.